ಓ ಎಸ್ ನಂ. 285/2017
ಪಿ ಡಬ್ಲ್ಯು1

ದಿನಾಂಕ:**03.01.2024** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ನೀಡಲಾಯಿತು.

ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಆರ್.ಎಂ.ಜಿ ವಕೀಲರಿಂದಃ-

ಪ್ರತಿವಾದಿಯರು ನನ್ನ **12** ಅಡಿ ರಸ್ತೆಯ ಜಾಗದಲ್ಲಿ **2** ಅಡಿ ಜಾಗವನ್ನು ಒತ್ತುವರಿ ಮಾಡಿಕೊಂಡಿರುವುದರಿಂದ ಈ ದಾವೆಯನ್ನು ಅವರ ಮೇಲೆ ಹೂಡಿರುತ್ತೇನೆ. ದಾವಾ ಸ್ವತ್ತಿನಲ್ಲಿ ಕಾಣಿಸುತ್ತಿರುವ ಹೆಚ್.ಎಲ್ ನಂ.**41,42** ಪ್ರತಿವಾದಿಯರ ಸ್ವತ್ತಾಗಿರತ್ತದೆ. ನಾನು ದಾವಾ ಸ್ವತ್ತಿನಲ್ಲಿರುವ ನೀಡಿರುವ ಚೆಕ್ಕುಬಂದಿ ಹೆಚ್.ಎಲ್ ನಂ.**41, 42** ಕ್ಕೆ ಸಂಬಂದಪಟ್ಟಿರುವುದಾಗಿರುತ್ತದೆ. ಹೆಚ್.ಎಲ್.ನಂ.**43, 44** ಕ್ಕೂ ಹೆಚ್.ಎಲ್. **41,42** ಕ್ಕೂ ಯಾವುದೇ ರೀತಿ ಸಂಬಂದ ಇಲ್ಲ ಎಂದರೆ ಸರಿ ಅಲ್ಲ. ಸಾಕ್ಷಿ ಮುಂದುವರಿದು ರಸ್ತೆಯನ್ನು ತೋರಿಸುವ ಸಲುವಾಗಿ ಸದರಿ **41, 42** ನ್ನು ತೋರಿಸಿರುವುದಾಗಿ ಹೇಳುತ್ತಾರೆ. ನಾನು ನೀಡಿರುವ ಚೆಕ್ಕುಬಂದಿಯಲ್ಲಿ ಯಾವುದೇ ರಸ್ತೆ ಇಲ್ಲ ಎಂದರೆ ಸರಿ ಅಲ್ಲ.

**2.** ಸಾಕ್ಷಿಯು ಪ್ರತಿವಾದಿಯರು ತಮ್ಮಣ್ಣನವರಿಂದ ಹೆಚ್.ಎಲ್ ನಂ.**42** ನ್ನು ಖರೀದಿ ಮಾಡಿದ್ದು ಸದರಿ ಸ್ವತ್ತಿನ ಚೆಕ್ಕುಬಂದಿಯ ದಕ್ಷಿಣಕ್ಕೆ **12** ಅಡಿ ರಸ್ತೆ ಎಂದು ನಮೂದಾಗಿರುತ್ತದೆ ಎಂದು ಹೇಳುತ್ತಾರೆ. ಹೆಚ್.ಎಲ್. ನಂ.**40** ಪೂರ್ವ-ಪಶ್ಚಿಮ **60** ಅಡಿ, ಉತ್ತರ-ದಕ್ಷಿಣ **75** ಅಡಿ ಸ್ವತ್ತನ್ನು ದಿಃ**17.10.1980** ರಲ್ಲಿ **1** ನೇ ಪ್ರತಿವಾದಿ ಹಾಗೂ ಅವರ ತಂದೆ ಲೇಟ್ ಕೃಷ್ಣಪ್ಪನವರು ಮುನಿಯಪ್ಪ ಎಂಬುವವರಿಂದ ಕರೀದಿ ಮಾಡಿದ್ದಾರೆ ಎಂದರೆ ಸರಿ. ಸದರಿ ಕ್ರಯ ಪತ್ರದಲ್ಲಿ ರುವ ಸ್ವತ್ತಿನ ದಕ್ಷಿಣಕ್ಕೆ **8** ಅಡಿ ರಸ್ತೆ ಎಂದು ನಮೂದು ಮಾಡಲಾಗಿದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಹೆಚ್.ಎಲ್. ನಂ.**41** ಪೂರ್ವ-ಪಶ್ಚಿಮ **30** ಅಡಿ, ಉತ್ತರ-ದಕ್ಷಿಣ **90** ಅಡಿ ಸ್ವತ್ತನ್ನು ಮುನಿರೆಡ್ಡಿ ರವರಿಂದ ಲೇಟ್ ಕೃಷ್ಣಪ್ಪನವರ ಅಣ್ಣನಾದ ಮರಿಕೆಂಪಣ್ಣನವರು ದಿಃ**31.08.1978** ರಲ್ಲಿ ಖರೀದಿ ಮಾಡಿರುವ ವಿಚಾರ ನನಗೆ ತಿಳಿದಿರುತ್ತದೆ. ಸದರಿ ಕ್ರಯ ಪತ್ರದಲ್ಲಿರುವ ಸ್ವತ್ತಿನ ದಕ್ಷಿಣಕ್ಕೂ ಸಹ **8** ಅಡಿ ರಸ್ತೆ ಎಂದು ನಮೂದು ಮಾಡಲಾಗಿದೆ ಎಂದರೆ ಸರಿ ಅಲ್ಲ. **12** ಅಡಿ ರಸ್ತೆ ಎಂದು ಹೇಳುತ್ತಾರೆ. ಹೆಚ್.ಎಲ್. ನಂ.**42** ಮೊದಲು ನಿವೇಶನ ಸಂಖ್ಯೆ **6** ಆಗಿದ್ದು, ಅದರ ವಿಸ್ತೀರ್ಣ ಪೂರ್ವ-ಪಶ್ಚಿಮ **40** ಅಡಿ, ಉತ್ತರ-ದಕ್ಷಿಣ **45** ಅಡಿ ಸ್ವತ್ತನ್ನು

ಲೇಟ್ ಕೃಷ್ಣಪ್ಪನವರ ಅಣ್ಣನಾದ ಕೆಂಪೇಗೌಡರಿಗೆ ಸರ್ಕಾರದಿಂದ ಮಂಜೂರಾಗಿದ್ದು ಹಕ್ಕು ಪತ್ರವನ್ನು ನೀಡಲಾಗಿರುತ್ತದೆ ಎಂದರೆ ಸರಿ ಅಲ್ಲ ಸದರಿ ಸ್ವತ್ತಿನ ಪೂರ್ವಕ್ಕೆ **8** ಅಡಿ ರಸ್ತೆ ಎಂದು ಸಹ ನಮೂದು ಮಾಡಲಾಗಿರುತ್ತದೆ ಎಂದರೆ ಸರಿ ಅಲ್ಲ. ಸಾಕ್ಷಿಯವೂದೇ ಹಕ್ಕುಪತ್ರವನ್ನು ನೀಡಿರುವುದಿಲ್ಲ ಎಂದು ಹೇಳುತ್ತಾರೆ. **1** ನೇ ಪ್ರತಿವಾದಿಯರಿಗೂ ಸಹ ನಿವೇಶನ ಸಂಖ್ಯೆ **8** ಪೂರ್ವ ಪಶ್ಚಿಮ **40** ಅಡಿ, ಉತ್ತರ ದಕ್ಷಿಣ **40** ಅಡಿಗೆ ಹಕ್ಕು ಪತ್ರವನ್ನು **1992** ರಲ್ಲಿ ನೀಡಲಾಗಿರುತ್ತ ದೆ ಎಂದರೆ ಸರಿ ಅಲ್ಲ. ಸದರಿ ಸ್ವತ್ತಿನ ಹಕ್ಕುಪತ್ರದ ಸ್ವತ್ತಿನ ಪೂರ್ವ ದಿಕ್ಕಿಗೆ **8** ಅಡಿ ರಸ್ತೆ ಎಂದು ಹೇಳಲಾಗಿರುತ್ತದೆ ಎಂದರೆ ಸರಿ ಅಲ್ಲ. ಮೇಲೆ ಹೇಳಿದ ಎಲ್ಲಾ ಸ್ವತ್ತುಗಳನ್ನು ಪಂಚಾಯಿತಿಯಲ್ಲಿ ಪೂರ್ವ ಪಶ್ಚಿಮ **125** ಅಡಿ, ಉತ್ತರ ದಕ್ಷಿಣ **137** ಅಡಿ ಎಂದು **1** ನೇ ಪ್ರತಿವಾದಿ ಹೆಸರಿಗೆ ಖಾತೆ ಆಗಿರುತ್ತದೆ ಎಂದರೆ ಸರಿ ಅಲ್ಲ. ಸಾಕ್ಷಿ ಸುಳ್ಳು ಖಾತೆ ಮಾಡಿಸಿಕೊಂಡಿರುವುದಾಗಿ ಹೇಳುತ್ತಾರೆ. ಸದರಿ ಸ್ವತ್ತಿನ ಖಾತೆಯನ್ನು ಮಾಡುವ ಮೊದಲು ಭಕ್ತರಹಳ್ಳಿ ಗ್ರಾಮ ಪಂಚಾಯಿತಿಯವರು ದಿಃ**30.12.1999** ರಲ್ಲಿ ಪಂಚಾಯಿತಿ ರೆಸೆಲೂಷನನ್ನು ನಡೆಸಿ ಅಂಗೀಕಾರ ಆದ ಮೇಲೆ ಹೇಳಿದ **2** ಹಕಕ್ಕು ಪತ್ರದ ಸ್ವತ್ತುಗಳಿಗೆ ಪಪೂರ್ವಕ್ಕೆ ರಸ್ತೆ ಪಶ್ಚಿಮಕ್ಕೆ ಹನುಮಂತರಾಯಪ್ಪನವರ ಸ್ವತ್ತು ಹಾಗೂ ಹುಣಿಸೇ ತೋಪು, ಉತ್ತರಕ್ಕೆ ಸರ್ಕಾರಿ, ದಕ್ಷಿಣಕ್ಕೆ **8** ಅಡಿ ದಾರಿ ಹಾಗೂ ನಂಜೇಗೌಡರು ಎಂದು ದಾಖಲು ಮಾಡಿರುತ್ತಾರೆ ಎಂದರೆ ಸರಿ ಅಲ್ಲ. ಸಾಕ್ಷಿ ಸುಳ್ಳು ದಾಖಲೆಯನ್ನು ಸೃಷ್ಟಿ ಮಾಡಿರುವುದಾಗಿ ಹೇಳುತ್ತಾರೆ. ಸದರಿ ಖಾತೆಯನ್ನು ಪ್ರಶ್ನಿಸಿ ನಾನು ಇಒ ನ್ಯಾಯಾಲಯದಲ್ಲಿ ಪ್ರಕರಣ ಸಂಖೆ ವಿಪಿಸಿ ಸಂಖೆ**.7/2016-17** ನ್ನು ಹೂಡಿದ್ದೆ ಎಂದರೆ ಸರಿ. ಸದರಿ ನ್ಯಾಯಾಲಯದಿಂದ ನನಗೆ ಹ ಾಗೂ ಪಂಚಾಯಿತಿಗೆ ಸ್ಥಳ ತಿನಿಖೆ ಸಂಬಂದ ನೋಟೀಸನ್ನು ನೀಡಲಾಗಿರುತ್ತದೆ ಎಂದರೆ ಸರಿ ಅಲ್ಲ. ಸಾಕ್ಷಿ ನನಗೆ ಯಾವುದೇ ನೋಟೀಸು ಬಂದಿರುವುದಿಲ್ಲ ಎಂದುಹೇಳುತ್ತಾರೆ.

**3.**ಸದರಿ ನೋಟೀಸಿನಂತೆ ಪಿಡಿಒ ರವರು ಸ್ಥಳ ತನಿಖೆಯನ್ನು ನಡೆಸಿರುತ್ತಾರೆ ಎಂದರೆ ಸರಿ ಅಲ್ಲ. ಸದರಿ ಸ್ಥಳ ತನಿಖೆ ಸಮಯದಲ್ಲಿ ನಾನು ಸಹ ಹಾಜರಿದ್ದೆ ಎಂದರೆ ಸರಿ ಅಲ್ಲ. ಸ್ಥಳ ತನಿಖೆಯನ್ನು ನಡೆಸಿದ ನಂತರ ದಿಃ**15.06.2017** ರಲ್ಲಿ ಪಂಚಾಯಿತಿಯವರು ಮತ್ತೆ ಸಾಮಾನ್ಯ ಸಭೇಯನ್ನು ನಡೆಸಿ ಹೆಚ್.ಎಲ್ ನ **41,42,43** ರಲ್ಲಿ ದಕ್ಷಿಣಕ್ಕೆ **8** ಅಡಿ ರಸ್ತೆ ಸಾಕು ಎಂದು ನಮೂದು ಮಾಡಿರುತ್ತಾರೆ ಎಂದರೆ ಸರಿ ಅಲ್ಲ. ಸದರಿ ರೆಸೆಲೂಷನ್ ದಾಖಲೆಯನ್ನು ಪಂಚಾಯತಿರವರು ಇಒ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ರೆಸಲೂಷನ್ ದಾಖಲೆಯನ್ನು ಪರಿಗಣಿಸಿ ಇಒ ನ್ಯಾಯಾಲಯವು ನಾನು ಸಲ್ಲಿಸಿದ ಪ್ರಕರಣವನ್ನು

ವಜಾಗೊಳಿಸಿರುತ್ತದೆ ಎಂದರೆ ಸಾಕ್ಷಿ ಸದರಿ ಆದೇಶದ ಮೇಲೆ ನಾನು ಈಗ ಮಾನ್ಯ ಕರ್ನಾಟಕ ಉಚ್ಚ ನನ್ಯಾಯಾಲಯದಲ್ಲಿ ಅಪೀಲು ಸಲ್ಲಿಸಿರುವುದಾಗಿ ಹೇಳುತ್ತಾರೆ.

(ಮುಂದುವರಿದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಕಾಲಾವಕಾಶ ಕೋರಿದ್ದು, ಪಾಟೀ ಸವಾಲಿಗೆ ಕಾಲಾವಕಾಶ ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಲಾಯಿತು.)

ಓ ಹೇ ಕೇ ಸ ಇದೆ.

ಪ್ರಧಾನ ಸಿ. ನ್ಯಾ. ಮತ್ತು
ಜೆಎಂಎಫ್, ಶಿಡ್ಲಘಟ್ಟ